# ಸಾವಿರ ದೇಗುಲಗಳ ನಂದಾದೀಪ

■ ಜಯಶ್ರೀ ಕಾಸರವಳ್ಳಿ

ಇಂಡೊನೇಷ್ಯಾ ಮುಸ್ಲಿಂ ಬಾಹುಳ್ಯದ ರಾಷ್ಟ್ರವಾದರೆ, ಅಲ್ಲಿನ ಬಾಲಿ ಹಿಂದೂಗಳು ಹೆಚ್ಚಾಗಿರುವ ದ್ವೀಪ. ನದಿ, ಸಮುದ್ರ, ಜಲಪಾತ, ಅಗ್ನಿಪರ್ವತ, ಕಾಡುಮೇಡುಗಳಿಂದ ಪ್ರಾಕೃತಿಕವಾಗಿ ಸಮೃದ್ಧವಾಗಿ ಬಾಲಿಯ ಮತ್ತೊಂದು ಆಕರ್ಷಣೆ ಊರುಕೇರಿಗಳ ತುಂಬೆಲ್ಲ ತುಂಬಿಕೊಂಡಿರುವ ದೇಗುಲಗಳು. ಇಡೀ ದ್ವೀಪವೇ ಬೃಹತ್ ದೇಗುಲ ಸಮುಚ್ಚಯದಂತೆ ಕಾಣಿಸುತ್ತದೆ.

